ಸೂ. 56 74. ಅಲ್‌ಮುದ್ದಸ್ಸಿರ್ ರು. 2

سُورَةُ الْمُدَّثِّرِ مَكِّيَّةٌ

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللهِ الرَّحْمٰنِ الرَّحِيْمِ

1. ಹೊದ್ದು ಮಲಗುವವರೇ![1] — يٰۤاَيُّهَا الْمُدَّثِّرُ ۝١

2. ಎದ್ದೇಳಿರಿ ಮತ್ತು ಎಚ್ಚರಿಸಿರಿ- — قُمْ فَاَنْذِرْ ۝٢

3. ಮತ್ತು ನಿಮ್ಮ ಪ್ರಭುವಿನ ಹಿರಿಮೆಯನ್ನು ಘೋಷಿಸಿರಿ- — وَرَبَّكَ فَكَبِّرْ ۝٣

4. ಮತ್ತು ನಿಮ್ಮ ವಸ್ತ್ರಗಳನ್ನು ಶುಚಿಯಾಗಿರಿಸಿರಿ- — وَثِيَابَكَ فَطَهِّرْ ۝٤

5. ಮತ್ತು ಮಾಲಿನ್ಯದಿಂದ ದೂರವಿರಿ. — وَالرُّجْزَ فَاهْجُرْ ۝٥

6. ಹೆಚ್ಚು ಪಡೆಯಲಿಕ್ಕಾಗಿ ಉಪಕಾರ ಮಾಡಬೇಡಿರಿ- — وَلَا تَمْنُنْ تَسْتَكْثِرُ ۝٦

7. ಮತ್ತು ನಿಮ್ಮ ಪ್ರಭುವಿಗಾಗಿ ತಾಳ್ಮೆ ವಹಿಸಿರಿ. — وَلِرَبِّكَ فَاصْبِرْ ۝٧

8. ಕಹಳೆ ಊದಲ್ಪಡುವಾಗ,[2] — فَاِذَا نُقِرَ فِى النَّاقُوْرِ ۝٨

9. ಆ ದಿನವು ಅತ್ಯಂತ ಕಠಿಣ ದಿನವಾಗಿರುವುದು- — فَذٰلِكَ يَوْمَئِذٍ يَّوْمٌ عَسِيْرٌ ۝٩

10. ಸತ್ಯನಿಷೇಧಿಗಳಿಗೆ ಅದು ಲಘುವಾಗಿರಲಾರದು. — عَلَى الْكٰفِرِيْنَ غَيْرُ يَسِيْرٍ ۝١٠

---

1. ಈ ಅಧ್ಯಾಯದ ಆರಂಭದ ಏಳು ಸೂಕ್ತಗಳಲ್ಲಿ ಪ್ರವಾದಿವರ್ಯರಿಗೆ(ಸ) ಮೊಟ್ಟಮೊದಲು ಇಸ್ಲಾಮಿನ ಸಂದೇಶ ಪ್ರಚಾರ ಮಾಡುವ ಆದೇಶ ಕೊಡಲಾಗಿದೆ. ಇದು ಪ್ರವಾದಿವರ್ಯರ(ಸ) ಮೇಲೆ ಅವತೀರ್ಣಗೊಂಡ, (ಸಂದೇಶವಾಹಕರೇ) ಓದಿರಿ, ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿಗೆ... ಎಂಬ ಆರಂಭಿಕ ದೇವವಾಣಿಯ (ಅಲ್ ಅಲಕ್) ನಂತರ ಅವತೀರ್ಣಗೊಂಡ ಎರಡನೆಯ ದೇವವಾಣಿಯಾಗಿದೆ.
2. ಈ ಭಾಗ ಆರಂಭಿಕ ಸೂಕ್ತಗಳ ಕೆಲವು ತಿಂಗಳ ನಂತರ, ಪ್ರವಾದಿವರ್ಯರ(ಸ) ವತಿಯಿಂದ ಇಸ್ಲಾಮಿನ ಬಹಿರಂಗ ಪ್ರಚಾರ ಆರಂಭವಾದ ಬಳಿಕ ಮೊದಲ ಬಾರಿ ಹಜ್ಜ್‌ನ ಕಾಲ ಬಂದಾಗ ಅವತೀರ್ಣಗೊಂಡಿತ್ತು. ಆಗ ಕುರೈಶನ ಸರದಾರರು ಒಂದು ಸಭೆ ಕರೆದು, ಹೊರಗಿನಿಂದ ಬರುವ ಹಜ್ಜ್ ಯಾತ್ರಿಕರನ್ನು, ಕುರ್‌ಆನ್ ಮತ್ತು ಪ್ರವಾದಿವರ್ಯರ(ಸ) ಬಗ್ಗೆ ತಪ್ಪುಕಲ್ಪನೆಗೀಡಾಗುವಂತೆ ಮಾಡಲು ಪ್ರಬಲವಾದ ಅಭಿಯಾನವೊಂದನ್ನು ನಡೆಸಲು ತೀರ್ಮಾನಿಸಿದ್ದರು.

11. ನನ್ನನ್ನೂ ನಾನು ಒಬ್ಬಂಟಿಯಾಗಿ ಸೃಷ್ಟಿಸಿದವನನ್ನೂ[3] ಬಿಟ್ಟು ಬಿಡಿರಿ-
ذَرْنِي وَمَنْ خَلَقْتُ وَحِيدًا ﴿١١﴾

12. ನಾನು ಅವನಿಗೆ ಹೇರಳ ಸಂಪತ್ತನ್ನು ಕೊಟ್ಟೆನು,
وَجَعَلْتُ لَهُ مَالًا مَمْدُودًا ﴿١٢﴾

13. ಅವನ ಜೊತೆಯಲ್ಲೇ ಹಾಜರಿರುವ ಪುತ್ರರನ್ನು ಕೊಟ್ಟೆನು-
وَبَنِينَ شُهُودًا ﴿١٣﴾

14. ಮತ್ತು ಅವನ ಪಾಲಿಗೆ ನಾಯಕತ್ವದ ಮಾರ್ಗವನ್ನು ಸುಗಮ ಗೊಳಿಸಿದೆನು-
وَمَهَّدْتُ لَهُ تَمْهِيدًا ﴿١٤﴾

15. ಇಷ್ಟಿದ್ದೂ ಅವನು, ನಾನು ಅವನಿಗೆ ಇನ್ನಷ್ಟು ಕೊಡಬೇಕೆಂದು ಆಶಿಸುತ್ತಿದ್ದಾನೆ-
ثُمَّ يَطْمَعُ أَنْ أَزِيدَ ﴿١٥﴾

16. ಖಂಡಿತ ಇಲ್ಲ. ಅವನು ನಮ್ಮ ವಚನಗಳನ್ನು ದ್ವೇಷಿಸುತ್ತಾನೆ.
كَلَّا ۖ إِنَّهُ كَانَ لِآيَاتِنَا عَنِيدًا ﴿١٦﴾

17. ನಾನಂತು ಅವನನ್ನು ಶೀಘ್ರವೇ ಒಂದು ಕಠಿಣ ಏರನ್ನು ಏರಿಸುವೆನು.
سَأُرْهِقُهُ صَعُودًا ﴿١٧﴾

18. ಅವನು ಯೋಚಿಸಿದನು ಮತ್ತು ಮಾತನ್ನು ಸೃಷ್ಟಿಸಲು ಪ್ರಯತ್ನಿಸಿದನು-
إِنَّهُ فَكَّرَ وَقَدَّرَ ﴿١٨﴾

19. ಅವನ ಮೇಲೆ ಶಾಪವಿರಲಿ, ಅವನು ಸೃಷ್ಟಿಸಲು ಪ್ರಯತ್ನಿಸಿದ ಮಾತು ಎಂತಹದು!
فَقُتِلَ كَيْفَ قَدَّرَ ﴿١٩﴾

20. ಹೌದು, ಅವನ ಮೇಲೆ ಶಾಪವಿರಲಿ. ಅವನು ಸೃಷ್ಟಿಸ ಬಯಸಿದ ಮಾತು ಎಂತಹದು?
ثُمَّ قُتِلَ كَيْفَ قَدَّرَ ﴿٢٠﴾

21. ಆ ಬಳಿಕ ಅವನು (ಜನರ ಕಡೆಗೆ) ನೋಡಿದನು-
ثُمَّ نَظَرَ ﴿٢١﴾

22. ತರುವಾಯ ಹಣೆ ಮುದುಡಿಸಿಕೊಂಡನು ಮತ್ತು ಮುಖ ಮುರಿದುಕೊಂಡನು,
ثُمَّ عَبَسَ وَبَسَرَ ﴿٢٢﴾

23. ಅನಂತರ ಮರಳಿದನು ಮತ್ತು ಅಹಂಭಾವಕ್ಕೊಳಗಾದನು-
ثُمَّ أَدْبَرَ وَاسْتَكْبَرَ ﴿٢٣﴾

3. ಅರ್ಥಾತ್- ವಲೀದ್ ಬಿನ್ ಮುಗೀರಃ ಆಗಿದ್ದಾನೆ. ಅವನು ಕುರ್‌ಆನ್ ಅಲ್ಲಾಹನ ವಾಣಿಯಾಗಿದೆ ಎಂದು ಅಂತಃಪ್ರಜ್ಞೆಯಿಂದ ನಂಬುವವನಾಗಿದ್ದನು. ಆದರೆ ಮಕ್ಕಾದಲ್ಲಿ ತನ್ನ ನಾಯಕತ್ವವನ್ನು ಬಾಕಿಯುಳಿಸಲಿಕ್ಕಾಗಿ ಅವನು ಮೇಲೆ ಪ್ರಸ್ತಾಪಿಸಲಾದ ಸಭೆಯಲ್ಲಿ ಭಾಗವಹಿಸಿ ಪ್ರವಾದಿವರ್ಯ ರನ್ನು(ಸ) ಜಾದೂಗಾರನೆಂದೂ ಕುರ್‌ಆನನ್ನು ಜಾದೂವೆಂದೂ ಪ್ರಚಾರ ಮಾಡುವ ಸಲಹೆ ನೀಡಿದ್ದನು.

24. ಕೊನೆಗೆ ಹೀಗೆಂದನು, "ಇದು ಹಿಂದಿನಿಂದಲೇ ನಡೆದು ಬಂದಿರುವ ಒಂದು ಜಾದು ಅಲ್ಲದೆ ಇನ್ನೇನೂ ಅಲ್ಲ- فَقَالَ إِنْ هَٰذَا إِلَّا سِحْرٌ يُؤْثَرُ ﴿٢٤﴾

25. ಇದೊಂದು ಮನುಷ್ಯವಾಣಿಯಾಗಿದೆ." إِنْ هَٰذَا إِلَّا قَوْلُ الْبَشَرِ ﴿٢٥﴾

26. ನಾನು ಸದ್ಯವೇ ಅವನನ್ನು ನರಕಕ್ಕೆ ತಳ್ಳಿ ಬಿಡುವೆನು- سَأُصْلِيهِ سَقَرَ ﴿٢٦﴾

27. ಮತ್ತು ನರಕವೇನಾಗಿರುತ್ತದೆಂದು ನಿಮಗೇನು ಗೊತ್ತು? وَمَا أَدْرَاكَ مَا سَقَرُ ﴿٢٧﴾

28. ಅದು ಉಳಿಸಲಿಕ್ಕೂ ಇಲ್ಲ ಬಿಡಲಿಕ್ಕೂ ಇಲ್ಲ.[4] لَا تُبْقِي وَلَا تَذَرُ ﴿٢٨﴾

29. ಚರ್ಮವನ್ನು ಸುಟ್ಟು ಹಾಕುವಂತಹದ್ದು. لَوَّاحَةٌ لِّلْبَشَرِ ﴿٢٩﴾

30. ಅದರ ಮೇಲೆ ಹತ್ತೊಂಭತ್ತು ಕಾರ್ಯಕರ್ತರು ನಿಯುಕ್ತರಾಗಿದ್ದಾರೆ. عَلَيْهَا تِسْعَةَ عَشَرَ ﴿٣٠﴾

31. ನಾವು[5] ನರಕದ ಕಾರ್ಯಕರ್ತರನ್ನಾಗಿ ದೇವಚರರನ್ನು ನೇಮಿಸಿದ್ದೇವೆ ಮತ್ತು ಅವರ ಸಂಖ್ಯೆಯನ್ನು ಸತ್ಯನಿಷೇಧಿಗಳ ಪಾಲಿಗೆ ಒಂದು ಪರೀಕ್ಷಾ ಸಾಧನವಾಗಿ ಮಾಡಿದ್ದೇವೆ- ಗ್ರಂಥದವರಿಗೆ ನಂಬಿಕೆ ಯುಂಟಾಗಲೆಂದು, ಸತ್ಯವಿಶ್ವಾಸಿಗಳ ವಿಶ್ವಾಸವು ವರ್ಧಿಸಲೆಂದು, ಗ್ರಂಥದವರು ಹಾಗೂ ಸತ್ಯವಿಶ್ವಾಸಿಗಳು ಯಾವುದೇ ಸಂಶಯದಲ್ಲಿ ಬಿದ್ದಿರಬಾರದೆಂದು[6] ಮತ್ತು ಮನಸ್ಸಿನಲ್ಲಿ ರೋಗವಿರುವವರು ಹಾಗೂ ಸತ್ಯನಿಷೇಧಿಗಳು- ಇಂತಹ ವಿಚಿತ್ರ ಮಾತಿನ ಮೂಲಕ ಅಲ್ಲಾಹನು ಉದ್ದೇಶಿಸುವುದಾದರೂ ಏನನ್ನು ಎಂದು ಹೇಳುವಂತಾ ಗಲು (ಹೀಗೆ ಮಾಡಿದ್ದೇವೆ). ಈ ರೀತಿ ಅಲ್ಲಾಹನು ತಾನಿಚ್ಛಿಸಿದವ ರನ್ನು ಪಥಭ್ರಷ್ಟಗೊಳಿಸಿ ಬಿಡುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಸನ್ಮಾರ್ಗದರ್ಶನ ಮಾಡುತ್ತಾನೆ ಮತ್ತು ನಿಮ್ಮ ಪ್ರಭುವಿನ ಸೇನೆ ಗಳನ್ನು ಸ್ವತಃ ಅವನ ಹೊರತು ಇನ್ನಾರೂ ಅರಿತಿಲ್ಲ ಮತ್ತು ಆ

وَمَا جَعَلْنَا أَصْحَابَ النَّارِ إِلَّا مَلَائِكَةً ۙ وَمَا جَعَلْنَا عِدَّتَهُمْ إِلَّا فِتْنَةً لِّلَّذِينَ كَفَرُوا لِيَسْتَيْقِنَ الَّذِينَ أُوتُوا الْكِتَابَ وَيَزْدَادَ الَّذِينَ آمَنُوا إِيمَانًا ۙ وَلَا يَرْتَابَ الَّذِينَ أُوتُوا الْكِتَابَ وَالْمُؤْمِنُونَ ۙ وَلِيَقُولَ الَّذِينَ فِي قُلُوبِهِم مَّرَضٌ وَالْكَافِرُونَ مَاذَا أَرَادَ اللَّهُ بِهَٰذَا مَثَلًا ۚ كَذَٰلِكَ يُضِلُّ اللَّهُ مَن يَشَاءُ وَيَهْدِي مَن يَشَاءُ ۚ وَمَا

4. ಅರ್ಥಾತ್- ಶಿಕ್ಷೆಗೆ ಅರ್ಹರಾದ ಯಾರನ್ನೂ ಅದು ಶಿಕ್ಷೆಗೆ ಗುರಿಯಾಗದೆ ಇರಲು ಬಿಡಲಾರದು. ಅದರ ವಶಕ್ಕೆ ಬರುವ ಪ್ರತಿಯೊಬ್ಬನನ್ನೂ ಅದು ಶಿಕ್ಷಿಸದೆ ಬಿಡಲಾರದು.

5. ಇಲ್ಲಿಂದ, "ನಿಮ್ಮ ಪ್ರಭುವಿನ ಸೇನೆಗಳನ್ನು ಸ್ವತಃ ಅವನ ಹೊರತು ಇನ್ನಾರೂ ಅರಿತಿರುವುದಿಲ್ಲ" ಎಂಬಲ್ಲಿಯ ತನಕದ ವಿಷಯಗಳು ಒಂದು ಉಪನುಡಿಯಾಗಿದೆ. ಈ ಮೂಲಕ ಉಪನ್ಯಾಸದ ನಡುವೆ ವಾಕ್ಸರಣಿಯನ್ನು ಕಡಿದು ಆಕ್ಷೇಪವೆತ್ತುವವರಿಗೆ ಉತ್ತರ ನೀಡಲಾಗಿದೆ. ನರಕದ ಕಾರ್ಯಕರ್ತರ ಸಂಖ್ಯೆ ಕೇವಲ ಹತ್ತೊಂಭತ್ತು ಎಂದು ಕೇಳಿ ಅವರು ಆ ಬಗ್ಗೆ ಅಪಹಾಸ್ಯ ಮಾಡಲಾರಂಭಿಸಿದ್ದರು. ಆದಮ್(ಅ) ಕಾಲದಿಂದ ಹಿಡಿದು ನಿರ್ಣಾಯಕ ದಿನದ ತನಕ ಸತ್ಯನಿಷೇಧ ಮತ್ತು ಮಹಾಪಾಪಗಳನ್ನೆಸಗಿದ ಮಾನವರೆಲ್ಲರನ್ನೂ ಈ ನರಕಕ್ಕೆ ಹಾಕಲಾಗುವುದು ಎಂದು ಒಂದೆಡೆ ನಮ್ಮೊಡನೆ ಹೇಳಲಾಗುತ್ತಿದೆ. ಇನ್ನೊಂದೆಡೆ ಇಷ್ಟು ದೊಡ್ಡ ನರಕದ ಅಸಂಖ್ಯ ಮಾನವರಿಗೆ ಕೇವಲ ಹತ್ತೊಂಭತ್ತು ಮಂದಿ ಕಾರ್ಯಕರ್ತರನ್ನು ನೇಮಿಸಲಾಗಿದೆ ಎಂದು ಹೇಳಲಾಗುತ್ತಿದೆ. ಈ ಮಾತು ಅವರಿಗೆ ವಿಚಿತ್ರವೆನಿಸಿತು.

6. ಗ್ರಂಥದವರು ಮತ್ತು ಸತ್ಯನಿಷೇಧಿಗಳು ದೇವಚರರ ಅಸಾಮಾನ್ಯ ಶಕ್ತಿ-ಸಾಮರ್ಥ್ಯಗಳ ಬಗ್ಗೆ ತಿಳಿದಿದ್ದುದರಿಂದ ಕೇವಲ ಹತ್ತೊಂಭತ್ತು ಮಂದಿ ದೇವಚರರು ನರಕದ ವ್ಯವಸ್ಥೆಯನ್ನು ಹೇಗೆ ನೋಡಿಕೊಳ್ಳುವರು ಎಂಬ ಬಗ್ಗೆ ಅವರಿಗೆ ಯಾವುದೇ ರೀತಿಯ ಸಂಶಯವಿರಲಾರದು.

ನರಕವನ್ನು ಪ್ರಸ್ತಾಪಿಸಿರುವುದು ಜನರಿಗೆ ಉಪದೇಶ ಸಿಗಬೇಕೆಂದಲ್ಲದೆ ಬೇರಾವ ಉದ್ದೇಶದಿಂದಲೂ ಅಲ್ಲ.

يعلم جنود ربك الا هو وما هي الا ذكرى للبشر ﴿٣١﴾

32. ಖಂಡಿತ ಅಲ್ಲ.[7] ಚಂದ್ರನಾಣೆ-

كلا والقمر ﴿٣٢﴾

33. ಮತ್ತು ರಾತ್ರಿಯಾಣೆ. ಅದು ಮರಳುವಾಗ-

واليل اذ ادبر ﴿٣٣﴾

34. ಮತ್ತು ಮುಂಜಾವಿನಾಣೆ- ಅದು ಬೆಳಗುವಾಗ-

والصبح اذا اسفر ﴿٣٤﴾

35. ಈ ನರಕವೂ ಮಹಾ ವಸ್ತುಗಳ ಪೈಕಿ ಒಂದಾಗಿದೆ-[8]

انها لاحدى الكبر ﴿٣٥﴾

36. ಅದು ಮಾನವರ ಪಾಲಿಗೆ ಎಚ್ಚರಿಕೆಯಾಗಿದೆ-

نذيرا للبشر ﴿٣٦﴾

37. ನಿಮ್ಮ ಪೈಕಿ ಮುಂದುವರಿಯಲಿಚ್ಛಿಸುವ ಅಥವಾ ಹಿಂದುಳಿಯಲಿಚ್ಛಿಸುವ ಪ್ರತಿಯೊಬ್ಬನ ಪಾಲಿಗೆ ಅದು ಎಚ್ಚರಿಕೆಯಾಗಿದೆ.

لمن شاء منكم ان يتقدم او يتاخر ﴿٣٧﴾

38. ಪ್ರತಿಯೊಬ್ಬನೂ ತನ್ನ ದುಡಿಮೆಯ ಬದಲಿಗೆ ಅಡವಿಡಲ್ಪಟ್ಟಿದ್ದಾನೆ-

كل نفس بما كسبت رهينة ﴿٣٨﴾

39. ಬಲಗಡೆಯವರ ಹೊರತು.

الا اصحب اليمين ﴿٣٩﴾

40-41. ಅವರು ಸ್ವರ್ಗದಲ್ಲಿರುವರು. ಅವರು ಅಪರಾಧಿಗಳೊಡನೆ ಹೀಗೆ ಕೇಳುವರು-

في جنت يتساءلون ﴿٤٠﴾ عن المجرمين ﴿٤١﴾

42. "ನಿಮ್ಮನ್ನು ನರಕಕ್ಕೆ ಒಯ್ದುದು ಯಾವುದು?"[9]

ما سلككم في سقر ﴿٤٢﴾

43. ಅವರು ಹೇಳುವರು; "ನಾವು ನಮಾಝ್ ಮಾಡುವವರಾಗಿರಲಿಲ್ಲ-

قالوا لم نك من المصلين ﴿٤٣﴾

44. ಮತ್ತು ದರಿದ್ರರಿಗೆ ಉಣಿಸುತ್ತಿರಲಿಲ್ಲ-

ولم نك نطعم المسكين ﴿٤٤﴾

45. ಮತ್ತು ಸತ್ಯದ ವಿರುದ್ಧ ಮಾತುಗಳನ್ನು ಸೃಷ್ಟಿಸುವವರ ಜೊತೆ ಸೇರಿ ನಾವೂ ಮಾತುಗಳನ್ನು ಸೃಷ್ಟಿಸುತ್ತಿದ್ದೆವು-

وكنا نخوض مع الخائضين ﴿٤٥﴾

46. ಮತ್ತು ನಾವು ಪ್ರತಿಫಲದ ದಿನವನ್ನು ಸುಳ್ಳೆಂದು ಹೇಳುತ್ತಿದ್ದೆವು-

وكنا نكذب بيوم الدين ﴿٤٦﴾

---

7. ಅರ್ಥಾತ್- ಈ ರೀತಿ ಅಪಹಾಸ್ಯ ಮಾಡಲು ಇದೊಂದು ಗಾಳಿಮಾತಲ್ಲ.
8. ಅರ್ಥಾತ್- ಚಂದ್ರ ಮತ್ತು ದಿನ-ರಾತ್ರಿಗಳು ಅಲ್ಲಾಹನ ಮಹಿಮೆಯ ಭವ್ಯ ಕುರುಹುಗಳಾಗಿರುವಂತೆಯೇ ನರಕವೂ ಅವನ ಮಹಿಮಾದ್ಭುತಗಳ ಪೈಕಿ ಒಂದಾಗಿದೆ.
9. ಅರ್ಥಾತ್- ಸ್ವರ್ಗದಲ್ಲಿ ಕುಳಿತಿರುತ್ತಲೇ ಅವರು ನರಕವಾಸಿಗಳೊಡನೆ ಮಾತನಾಡುತ್ತಾ ಈ ಪ್ರಶ್ನೆ ಕೇಳುವರು.

47. ಕೊನೆಗೆ ಆ ಖಚಿತ ದಿನವು ನಮಗೆ ಎದುರಾಗಿಯೇ ಬಿಟ್ಟಿತು."

حَتّٰىٓ اَتٰىنَا الْيَقِيْنُ ۝٤٧

48. ಅಂದು ಶಿಫಾರಸು ಮಾಡುವವರ ಶಿಫಾರಸು ಅವರಿಗೆ ಯಾವುದೇ ಪ್ರಯೋಜನ ನೀಡದು.

فَمَا تَنْفَعُهُمْ شَفَاعَةُ الشّٰفِعِيْنَ ۝٤٨

49. ಇವರು ಈ ಉಪದೇಶದಿಂದ ವಿಮುಖರಾಗಲು ಇವರಿಗೆ ಆಗಿರುವುದಾದರೂ ಏನು?

فَمَا لَهُمْ عَنِ التَّذْكِرَةِ مُعْرِضِيْنَ ۝٤٩

50-51. ಇವರ ಅವಸ್ಥೆಯು ಸಿಂಹಕ್ಕೆ ಅಂಜಿ ಓಡುತ್ತಿರುವ ಕಾಡು ಕತ್ತೆಗಳಂತಿದೆ.[10]

كَاَنَّهُمْ حُمُرٌ مُّسْتَنْفِرَةٌ ۝٥٠
فَرَّتْ مِنْ قَسْوَرَةٍ ۝٥١

52. ವಾಸ್ತವದಲ್ಲಿ ಇವರ ಪೈಕಿ ಪ್ರತಿಯೊಬ್ಬನೂ ತನ್ನ ಹೆಸರಿಗೆ ಬಹಿರಂಗ ಪತ್ರಗಳು ಕಳುಹಿಸಲ್ಪಡಬೇಕೆಂದು ಬಯಸುತ್ತಾನೆ-[11]

بَلْ يُرِيْدُ كُلُّ امْرِئٍ مِّنْهُمْ اَنْ يُّؤْتٰى صُحُفًا مُّنَشَّرَةً ۝٥٢

53. ಖಂಡಿತ ಇಲ್ಲ. ವಾಸ್ತವದಲ್ಲಿ ಇವರಿಗೆ ಪರಲೋಕದ ಭಯವಿಲ್ಲ.

كَلَّا ۗ بَلْ لَّا يَخَافُوْنَ الْاٰخِرَةَ ۝٥٣

54. ಖಂಡಿತ ಇಲ್ಲ.[12] ಇದೊಂದು ಉಪದೇಶವಾಗಿದೆ.

كَلَّآ اِنَّهٗ تَذْكِرَةٌ ۝٥٤

55. ಇಷ್ಟವುಳ್ಳವನು ಇದರಿಂದ ಪಾಠ ಪಡೆಯಲಿ.

فَمَنْ شَاۤءَ ذَكَرَهٗ ۝٥٥

56. ಅಲ್ಲಾಹನೇ ಇಚ್ಛಿಸುವ ಹೊರತು ಇವರು ಯಾರೂ ಪಾಠ ಕಲಿಯಲಾರರು. ಅವನೇ ಭಯಭಕ್ತಿಗೆ ಅರ್ಹನು ಮತ್ತು ಅವನೇ (ಭಯಭಕ್ತಿಯುಳ್ಳವರನ್ನು) ಕ್ಷಮಿಸಬಲ್ಲವನಾಗಿರುತ್ತಾನೆ.

وَمَا يَذْكُرُوْنَ اِلَّآ اَنْ يَّشَاۤءَ اللّٰهُ ۗ
هُوَ اَهْلُ التَّقْوٰى وَاَهْلُ الْمَغْفِرَةِ ۝٥٦

---

10. ಇದೊಂದು ಅರಬಿ ನಾಣ್ಣುಡಿಯಾಗಿದೆ. ಕಾಡುಕತ್ತೆಗಳ ಒಂದು ಸ್ವಭಾವವೆಂದರೆ ಅವು ಅಪಾಯದ ಸುಳಿವು ಸಿಗುತ್ತಲೇ ಕಂಗಾಲಾಗಿ ದಿಕ್ಕಾಪಾಲು ಓಡತೊಡಗುತ್ತವೆ. ಇತರ ಯಾವ ಪ್ರಾಣಿಯೂ ಹಾಗೆ ಓಡುವುದಿಲ್ಲ.

11. ಅರ್ಥಾತ್- ಅಲ್ಲಾಹನು ನಿಜವಾಗಿಯೂ ಮುಹಮ್ಮದ್‌ರನ್ನು(ಸ) ಪ್ರವಾದಿಯಾಗಿ ನೇಮಿಸಿದ್ದರೆ ಅವನು ಮಕ್ಕಾದ ಪ್ರತಿಯೊಬ್ಬ ಸರದಾರ ಮತ್ತು ಪ್ರತಿಯೊರ್ವ ನಾಯಕನ ಹೆಸರಿಗೆ ಪತ್ರ ಬರೆದು 'ಇವರು ನಮ್ಮ ಪ್ರವಾದಿ ಇವರನ್ನು ಅನುಸರಿಸಿರಿ' ಎಂದು ತಿಳಿಸಬೇಕೆಂದು ಇವರು ಬಯಸುತ್ತಾರೆ.

12. ಅರ್ಥಾತ್- ಅವರ ಇಂತಹ ಬೇಡಿಕೆಯನ್ನು ಎಂದೂ ಈಡೇರಿಸಲಾಗದು.